ನಾಳೆ ಬರುವುದು ನಮಗಿಂದೇ ಬರಲಿ
ಇಂದು ಬರುವುದು ನಮಗೀಗಲೇ ಬರಲಿ
ಆಗೀಗ ಎನ್ನದಿರು ಚನ್ನಮಲ್ಲಿಕಾರ್ಜುನ
ನಿಮ್ಮಗೆಲ್ಲರಿಗೂ ಶುಭವಾಗಲಿ.

ಶ್ರೀ ಎಸ್.ಎಸ್. ಪಾಟೀಲ್: ಆ ವಚನ ಇನ್ನಷ್ಟು ಇಲ್ಲಿ ಪ್ರಸ್ತುತವಾಗುವಂತಿದೆ.

ನಾಳೆ ಬಪ್ಪುದು ನಮಗಿಂದೇ ಬರಲಿ
ಇಂದು ಬಪ್ಪುದು ನಮಗೀಗಲೇ ಬರಲಿ
ಇದಕಾರಂಜುವರು ಇದಕಾರಳಕುವರು?
'ಜಾತಸ್ಯ ಮರಣಂ ಧ್ರುವಂ' ಎಂಬುದಾಗಿ
ನಮ್ಮ ಕೂಡಲ ಸಂಗಮದೇವರು ಬರೆದ
ಬರಹವ ತಪ್ಪಿಸುವಡ ಹರಿಬ್ರಹ್ಮಾದಿಗಳಿಗಳವಲ್ಲಾ

ಎಂಬ ವಚನ ಇದೆ. ಮುಂದಿನ ಬರಹ ಯಾರು ಬರೆಯುತ್ತಾರೋ,ಏನೋ? ನೀವು ಅಲ್ಲಿರುತ್ತೀರೋ? ಇಲ್ಲಿರುತ್ತೀರೋ?

(ಸದನದಲ್ಲಿ ನಗು)

ಶ್ರೀ ಎಸ್.ಎಂ. ಕೃಷ್ಣ: ಅದನ್ನೇ ನಾನು ಹೇಳಿದೆ ಭವಿಷ್ಯದ ಕಾಲಗರ್ಭದಲ್ಲಿ ಏನು ಬರೆದಿದೆಯೆಂದು ಯಾರೂ ಹೇಳುವುದಕ್ಕಾಗುವುದಿಲ್ಲ. ಒಮ್ಮೆ ನಾನು ಅತ್ತ ಕಡೆ ಇದ್ದಾಗ ದಿವಂಗತ ನಿಜಲಿಂಗಪ್ಪನವರಿಗೆ ಮಾತ್ರ ಹೇಳಿದ್ದು ಕಡತದಲ್ಲಿರಬಹುದೆಂದು ಕಾಣುತ್ತದೆ. 'ಯಾವತ್ತಾದರೊಂದು ದಿವಸ ನೀವು ಇಲ್ಲಿ ಕುಳಿತಿರುತ್ತೀರಿ, ನಾವು ಅಲ್ಲಿ ಕುಳಿತಿರುತ್ತೇವೆ' ಎಂದಾಗ ನಿಜಲಿಂಗಪ್ಪನವರು 'My yound friend is day dreaming' ಎಂದರು. ತಾವು ಹೇಳುವುದೂ ಕೂಡ ಆಗಬಹುದು ಅದು ಸಾಧ್ಯವಿಲ್ಲವೆಂದು ಹೇಳುವುದಿಲ್ಲ. ಆದರೆ, ನಿಮ್ಮನ್ನು ಅಲ್ಲಿಯೇ (ವಿರೋಧ ಪಕ್ಷವಾಗಿ) ಇರಿಸಿ, ನಾವು ಇಲ್ಲಿ (ಆಡಳಿತ ಪಕ್ಷವಾಗಿ) ಇರಬೇಕೆಂಬ ಪ್ರಯತ್ನವನ್ನು ನಾವು ಮಾಡುತ್ತೇವೆ. ಆ ಪ್ರಯತ್ನದಲ್ಲಿ ನಾವು ಯಶಸ್ಸು ಪಡೆಯುತ್ತೇವೋ, ಪಡೆಯುವುದಿಲ್ಲವೋ ಅದು ಐದು ಕೋಟಿ ಜನರ ಮೇಲೆ ನಿಂತಿದೆ! ಆ ಐದು ಕೋಟಿ ಜನರು ನಿಮಗೂ ಆಶೀರ್ವಾದ ಮಾಡಲಿ, ನಮಗೂ ಆಶೀರ್ವಾದ ಮಾಡಲಿ, ನಮಸ್ಕಾರ.

ಹನ್ನೊಂದನೆಯ ವಿಧಾನಸಭೆಯಲ್ಲಿ ನಡೆದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ ಹಾಗೂ ಮಾನ್ಯ ಸಭಾಧ್ಯಕ್ಷರ ಅನಿಸಿಕೆ

ಅಧ್ಯಕ್ಷರು : ಮಾನ್ಯ ಸಭಾನಾಯಕರೆ, ಗೌರವಾನ್ವಿತ ವಿರೋಧ ಪಕ್ಷದ ನಾಯಕರೆ, ವಿವಿಧ ವಿರೋಧ ಪಕ್ಷಗಳ ಮುಖಂಡರೆ, ಆತ್ಮೀಯ ಸದಸ್ಯರುಗಳೆ,

ಸನ್ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಎಸ್.ಎಂ. ಕೃಷ್ಣರವರು ರಾಜ್ಯದ ಅಧಿಕಾರ ಸೂತ್ರ ಹಿಡಿದಾಗ ಅವರು ಮತ್ತು ಅವರ ಸಂಪುಟದ ಸಹೋದ್ಯೋಗಿಗಳು ಈ ಸಭೆಯ ಅಧ್ಯಕ್ಷನನ್ನಾಗಿ

ಆಯ್ಕೆಯಾಗಬೇಕೆಂದು ಈ ಸದನದಲ್ಲಿ ಪ್ರಸ್ತಾಪ ಮಂಡಿಸಿ ತಾವೆಲ್ಲರೂ ಅದನ್ನು ಬೆಂಬಲಿಸಿ ನನಗೆ ಸಭಾಧ್ಯಕ್ಷನಾಗಿ ಸೇವೆ ಸಲ್ಲಿಸಲು ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ನನ್ನ ಮೇಲೆ ಇಟ್ಟ ವಿಶ್ವಾಸ ಮತ್ತು ಗೌರವಕ್ಕೆ ನಾನು ಮಾನ್ಯ ಮುಖ್ಯಮಂತ್ರಿಯವರಿಗೂ ಹಾಗೂ ತಮಗೆಲ್ಲರಿಗೂ ಋಣಿಯಾಗಿದ್ದೇನೆ. ನನ್ನ ಈ ಅವಧಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಹಾಗೂ ಇತರ ಪಕ್ಷಗಳ ನಾಯಕರುಗಳಾದ ಶ್ರೀ ಟಿ.ಜಿ.ಆರ್. ಸಿಂಧ್ಯಾರವರು, ಶ್ರೀ ಬಿ. ಸೋಮಶೇಖರ್‌ರವರು, ಶ್ರೀ ಚನ್ನಿಗಪ್ಪ ಹೆಗಡೆಯವರು ಹಾಗೂ ಇತರರು ತಮ್ಮದೇ ಆದ ರೀತಿಯಲ್ಲಿ ಸಹಕರಿಸಿದ್ದಾರೆ. ಈ ಸಂದರ್ಭದಲ್ಲಿ ಸದಾ ನನ್ನೊಡನೆ ಸಹಕರಿಸುತ್ತಿದ್ದ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾದ ಮಾನ್ಯ ಶ್ರೀ ಡಿ.ಬಿ. ಚಂದ್ರೇಗೌಡರವರನ್ನೂ, ಉಪಾಧ್ಯಕ್ಷರಾದ ಮಾನ್ಯ ಶ್ರೀ ಮನೋಹರ್ ತಹಶೀಲ್ದಾರ್ ಅವರನ್ನು ಹಾಗೂ ಸರ್ಕಾರದ ಮಾಜಿ ಮುಖ್ಯ ಸಚೇತಕರಾದ ಶ್ರೀ ರಾಜಾ ಅಮರೇಶ್ವರ ನಾಯ್ಕ ಅವರನ್ನು ಹಾಗೂ ಹಾಲಿ ಸಚೇತಕರಾದ ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ) ಅವರನ್ನು ನೆನೆಯುವುದು ನನ್ನ ಆದ್ಯ ಕರ್ತವ್ಯ ಅಲ್ಲದೆ, ಸದನದ ಎಲ್ಲಾ ಮಾನ್ಯ ಸದಸ್ಯರುಗಳೂ ಕೂಡ ಸಹಕಾರವನ್ನು ನೀಡಿರುತ್ತಾರೆ. ಈ ಸಂದರ್ಭದಲ್ಲಿ ನಾನು ಎಲ್ಲಾ ಸದಸ್ಯರುಗಳ ಹೆಸರುಗಳನ್ನು ಹೇಳಿ ಕೃತಜ್ಞತೆ ಅರ್ಪಿಸಲು ಸಾಧ್ಯವಾಗದು. ಮಾನ್ಯ ಸದಸ್ಯರುಗಳಿಗೆ ಸದನದಲ್ಲಿ ಭಾಗವಹಿಸಲು ಸಾಧ್ಯವಾದ ಮಟ್ಟಿಗೆ ಅವಕಾಶ ಕಲ್ಪಿಸಿರುತ್ತೇನೆ. ಆದರೆ, ಸಮಯದ ಅಭಾವದಿಂದ ಕೆಲವರಿಗೆ ಅವಕಾಶ ಸಿಗದಿರಬಹುದು. ಅಂತಹ ಸದಸ್ಯರೂ ಕೂಡ ನನ್ನೊಂದಿಗೆ ಸಹಕಾರ ನೀಡಿರುತ್ತಾರೆ. ಅವರಿಗೆಲ್ಲಾ ನನ್ನ ಕೃತಜ್ಞತೆಗಳು.

ಸದನದ ಘನತೆಯನ್ನು ಎತ್ತಿಹಿಡಿಯಲು ಸಾಕಷ್ಟು ಪ್ರಾಮಾಣಿಕ ಪ್ರಯತ್ನ ಮಾಡಿರುತ್ತೇನೆ. ನನ್ನ ಕರ್ತವ್ಯವನ್ನು ನಿರ್ವಹಿಸುವ ಸಂದರ್ಭದಲ್ಲಿ ಕಾರ್ಯಕಲಾಪಗಳನ್ನು ಸುಸೂತ್ರವಾಗಿ ನಡೆಸುವ ದೃಷ್ಟಿಯಿಂದ ಎರಡು ಬಾರಿ ಸದನದ ಕೆಲವು ಸದಸ್ಯರುಗಳನ್ನು ಹೊರಹಾಕಲು ಸದನದ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮಾವಳಿಗಳಲ್ಲಿ ಅವಕಾಶ ಉಪಯೋಗಿಸಿರುತ್ತೇನೆ. ಈ ಸಂದರ್ಭಗಳು ನನ್ನ ಮನಸ್ಸಿಗೆ ಅತ್ಯಂತ ನೋವುಂಟು ಮಾಡಿದ ಘಟನೆಗಳಾಗಿವೆ. ನನ್ನ ಅಧಿಕಾರಾವಧಿಯಲ್ಲಿ ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸಿ ಸುಲಲಿತವಾಗಿ ಸದನ ನಡೆಸಲು ನನ್ನೊಡನೆ ಸಹಕರಿಸಿದ ಸಭಾನಾಯಕರಾದ ಮಾನ್ಯ ಮುಖ್ಯಮಂತ್ರಿಗಳಿಗೂ, ಸಚಿವ ಸಂಪುಟದ ಸದಸ್ಯರುಗಳಿಗೂ, ವಿರೋಧ ಪಕ್ಷದ ನಾಯಕರಿಗೂ, ವಿವಿಧ ಪಕ್ಷಗಳ ನಾಯಕರುಗಳಿಗೂ, ವಿಧಾನಸಭೆಯ ಎಲ್ಲಾ ಮಾನ್ಯ ಸದಸ್ಯರುಗಳಿಗೂ, ಪತ್ರಕರ್ತರಿಗೂ ಆಕಾಶವಾಣಿ ಮತ್ತು ದೂರದರ್ಶನ ಮಾಧ್ಯಮಗಳಿಗೆ, ವಿವಿಧ ಇಲಾಖಾಧಿಕಾರಿಗಳಿಗೂ ಹಾಗೂ ವಿಧಾನಸಭೆಯ ಸಚಿವಾಲಯದ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೂ ನನ್ನ ಅಭಿನಂದನೆಗಳನ್ನು ಮತ್ತೊಮ್ಮೆ ಸಲ್ಲಿಸುತ್ತೇನೆ. ಸಚಿವಾಲಯದ ಅಧಿಕಾರಿ ವರ್ಗದವರೇನಿದ್ದಾರೆ, ಅವರ ಸಹಕಾರ ಇಲ್ಲದಿದ್ದ ಪಕ್ಷದಲ್ಲಿ ನಾನು ಇಷ್ಟು ಸುಲಲಿತವಾಗಿ ಸುಮಾರು ನಾಲ್ಕೂವರೆ ವರ್ಷಗಳ ಕಾಲ ವಿಧಾನಸಭೆಯ ಕಾರ್ಯಗಳನ್ನು ಪೂರೈಸುವುದಕ್ಕಾಗುತ್ತಿರಲಿಲ್ಲ. ಈ ಸಂದರ್ಭದಲ್ಲಿ ಅವರ ಕಾರ್ಯ ವೈಖರಿಯನ್ನು ನಾನು ಮೆಚ್ಚಬೇಕಾಗುತ್ತದೆ. ಇದರ ಜೊತೆಗೆ 1974ನೇ ಇಸವಿಯಲ್ಲಿ, ಸುಮಾರು ಮೂವತ್ತು ವರ್ಷಗಳ ಹಿಂದೆ ವಿಧಾನ ಪರಿಷತ್ತಿನ ಸಭಾಪತಿಯಾಗಿದ್ದಾಗ ಸನ್ಮಾನ್ಯ ಶ್ರೀ ಎಸ್.ಎಂ. ಕೃಷ್ಣರವರು ಸಂಸದೀಯ ಮತ್ತು ಕೈಗಾರಿಕಾ ಮಂತ್ರಿಗಳಾಗಿದ್ದರು. ಅಂದಿನಿಂದ ಇಂದಿನವರೆಗೂ ನಾನು ಅವರನ್ನು

ನೋಡಿರುವಂತೆ, ಅವರೊಬ್ಬ decent, dignified and intelligent ಆಗ ಮಂತ್ರಿಗಳಾಗಿದ್ದರು, ಈಗ ಮುಖ್ಯಮಂತ್ರಿಗಳಾಗಿದ್ದಾರೆ. ಆಗ ನಾನು ಸಭಾಪತಿಯಾಗಿದ್ದಾಗಲೂ ಸಹ ಅನೇಕ ರೀತಿಯಲ್ಲಿ ಸಹಕಾರ ಕೊಟ್ಟಿದ್ದರು. ಈಗಲೂ ನಾನು ಸಭಾಧ್ಯಕ್ಷನಾಗಿರುವಾಗ ಅವರು ಮುಖ್ಯಮಂತ್ರಿಯಾಗಿದ್ದಾರೆ. ಅಷ್ಟೇ ವ್ಯತ್ಯಾಸ ವಿನಾ ಬೇರೇನೂ ಇಲ್ಲ. ಹನ್ನೊಂದನೆಯ ವಿಧಾನಸಭೆಯಲ್ಲಿ ನಡೆದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿಯನ್ನು ಇದರೊಂದಿಗೆ ಲಗತ್ತಿಸಿರುತ್ತೇನೆ.

7. ಹನ್ನೊಂದನೆಯ ವಿಧಾನಸಭೆಯಲ್ಲಿ ನಡೆದ ಕಾರ್ಯಕಲಾಪಗಳ ಸಂಕ್ಷಿಪ್ತ ವರದಿ

ಹನ್ನೊಂದನೇ ವಿಧಾನ ಸಭೆಯ ಪ್ರಥಮ ಅಧಿವೇಶನವು ದಿನಾಂಕ 25.10.1999 ರಂದು ಸಮಾವೇಶಗೊಂಡು 1999–2004ರ ಅವಧಿಯಲ್ಲಿ ಏಳು ಅಧಿವೇಶನಗಳಲ್ಲಿ ಒಟ್ಟು 199 ದಿನಗಳು ಕಾರ್ಯಕಲಾಪಗಳನ್ನು ನಡೆಸಿ 986 ಗಂಟೆಗಳು 52 ನಿಮಿಷಗಳ ಕಾಲ ಸಭೆಯನ್ನು ನಡೆಸಿರುತ್ತದೆ.

ವಿಧಾನಸಭೆಯ ಅವಧಿಯಲ್ಲಿ ಕರ್ನಾಟಕದ ಘನತೆವೆತ್ತ ರಾಜ್ಯಪಾಲರು 6 ಬಾರಿ ಜಂಟಿ ಸದನವನ್ನುದ್ದೇಶಿಸಿ ಭಾಷಣ ಮಾಡಿರುತ್ತಾರೆ. ರಾಜ್ಯಪಾಲರ ಭಾಷಣದ ವಂದನಾರ್ಪಣಾ ಪ್ರಸ್ತಾಪದ ಮೇಲಿನ ಚರ್ಚೆಯು 25 ದಿವಸಗಳ ಕಾಲ ನಡೆದಿದ್ದು 140 ಸದಸ್ಯರು ಚರ್ಚೆಯಲ್ಲಿ ಭಾಗವಹಿಸಿರುತ್ತಾರೆ.

ಈ ಅವಧಿಯಲ್ಲಿ ನಿಧನರಾದ ಭಾರತದ ಮಾಜಿ ರಾಷ್ಟ್ರಪತಿಗಳಾದ ಡಾ: ಶಂಕರ್ ದಯಾಳ್ ಶರ್ಮಾ, ರಾಜ್ಯದ ಮಾಜಿ ರಾಜ್ಯಪಾಲರಾದ ಶ್ರೀ ಬಿ. ರಾಚಯ್ಯ, ಮಾಜಿ ಮುಖ್ಯ ಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲ್, ರಾಷ್ಟ್ರದ ಹಿರಿಯ ಮುತ್ಸದ್ದಿ, ಸಂಸದೀಯ ಪಟು, ಮಾಜಿ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆ, ಲೋಕಸಭೆಯ ಹಾಲಿ ಸದಸ್ಯರಾದ ಶ್ರೀ ಎಂ.ವಿ. ಚಂದ್ರಶೇಖರ್ ಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಪ್ಪ, ಭಾರತದ ಮಾಜಿ ಉಪರಾಷ್ಟ್ರಪತಿ ಮತ್ತು ಮಾಜಿ ಮುಖ್ಯಮಂತ್ರಿಯವರಾದ ಶ್ರೀ ಬಸಪ್ಪ ದಾನಪ್ಪ ಜತ್ತಿ, ಭಾರತದ ಉಪ ರಾಷ್ಟ್ರಪತಿ ಹಾಗೂ ರಾಜ್ಯಸಭೆಯ ಸಭಾಪತಿಯಾದ ಶ್ರೀ ಕೃಷ್ಣಕಾಂತ್, ಲೋಕಸಭೆಯ ಮಹಾ ಪ್ರಧಾನ ಕಾರ್ಯದರ್ಶಿಯವರಾದ ಶ್ರೀ ಎಸ್.ಎಲ್. ಶಕ್ದರ್, ಕಾಡುಗಳ್ಳ ವೀರಪ್ಪನ್‌ನಿಂದಿ ದುರ್ಮರಣಕ್ಕೀಡಾದ ಮಾಜಿ ಸಚಿವ ಶ್ರೀ ಹೆಚ್. ನಾಗಪ್ಪ ಹಾಗೂ ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಹಾಲಿ ಸದಸ್ಯರುಗಳು ಹಾಗೂ ಮಾಜಿ ಸದಸ್ಯರುಗಳು ಹಾಗೂ ಬಾಹ್ಯಾಕಾಶಯಾನಿ ಶ್ರೀಮತಿ ಕಲ್ಪನ ಚಾವ್ಲಾ ಸೇರಿದಂತೆ ಇತರ 66 ಗಣ್ಯ ವ್ಯಕ್ತಿಗಳ ನಿಧನದ ಗೌರವಾರ್ಥ ಸಂತಾಪ ಸೂಚನಾ ನಿರ್ಣಯವನ್ನು ಅಂಗೀಕರಿಸಲಾಗಿದೆ. 26ನೇ ಜನವರಿ, 2001 ರಂದು ಗುಜರಾತ್ ರಾಜ್ಯದಲ್ಲಿ ಸಂಭವಿಸಿದ ಭೂಕಂಪದಲ್ಲಿ ಅಸಂಖ್ಯಾತ ಜನರು ನಿಧನರಾದ ಬಗ್ಗೆ ಹಾಗೂ 11ನೇ ಸೆಪ್ಟೆಂಬರ್ 2001 ರಂದು ನ್ಯೂಯಾರ್ಕ್‌ನ ವಿಶ್ವ ವಾಣಿಜ್ಯ ಕೇಂದ್ರದ ಕಟ್ಟಡದ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯ ಬಗ್ಗೆ ಹಾಗೂ 13ನೇ ಡಿಸೆಂಬರ್, 2001ರಂದು ಸಂಸತ್ ಭವನದ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯನ್ನು ಖಂಡಿಸಿ, ದೇಶದ ಘನತೆಯನ್ನು ಕಾಪಾಡಿದ ಸಿಬ್ಬಂದಿಗೆ ಗೌರವ ಸೂಚಿಸಲಾಯಿತು.

ಈ ಅವಧಿಯಲ್ಲಿ ಡಾ: ರಾಜ್‌ಕುಮಾರ್ ಹಾಗೂ ಇತರ ಮೂವರನ್ನು ಕಾಡುಗಳ್ಳ ವೀರಪ್ಪನ್ ಅಪಹರಿಸಿ 109 ದಿನಗಳು ಒತ್ತೆಯಿಟ್ಟದ್ದ ವಿಷಯದ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ಸರ್ಕಾರದಿಂದ ಉತ್ತರ ನೀಡಲಾಗಿದೆ.

ವಿಧಾನ ಸಭೆಯ ಅವಧಿಯಲ್ಲಿ 20,886 ಪ್ರಶ್ನೆಗಳನ್ನು ಮಾನ್ಯ ಸದಸ್ಯರುಗಳಿಂದ ಸ್ವೀಕರಿಸಲಾಗಿದ್ದು, ಅವುಗಳಲ್ಲಿ 2,211 ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಹಾಗೂ 10,740 ಚುಕ್ಕೆ ರಹಿತ ಪ್ರಶ್ನೆಗಳಿಗೆ ಉತ್ತರಗಳನ್ನು ಒದಗಿಸಲಾಗಿದೆ.

ಒಟ್ಟು 84 ಗಮನ ಸೆಳೆಯುವ ಸೂಚನೆಗಳ ಚರ್ಚೆಯಾಗಿರುತ್ತವೆ. ನಿಯಮ 351ರ ಅಡಿಯಲ್ಲಿ 165 ಸೂಚನೆಗಳಿಗೆ ಉತ್ತರಿಸಲಾಗಿದೆ. ನಿಯಮ 69 ರಡಿಯಲ್ಲಿ 71 ಸೂಚನೆಗಳ ಪೈಕಿ 27 ಸೂಚನೆಗಳಿಗೆ ಚರ್ಚೆಗೆ ಅವಕಾಶ ಕಲ್ಪಿಸಿ ಉತ್ತರಿಸಲಾಗಿದೆ. 8 ಸೂಚನೆಗಳಿಗೆ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ, ನಿಯಮ 60ರ ಪೀಠಕ್ಕೆ 84 ನಿಲುವಳಿ ಸೂಚನೆಗಳಿಗೆ ಪ್ರಾರಂಭಿಕವಾಗಿ ಪ್ರಸ್ತಾಪ ಮಾಡಲು ಅವಕಾಶ ನೀಡಲಾಗಿದೆ.

ಒಟ್ಟು 1475 ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಗಿರುತ್ತವೆ. 10 ಅರ್ಜಿಗಳನ್ನು ಸದನಕ್ಕೆ ಒಪ್ಪಿಸಲು ಅವಕಾಶ ನೀಡಲಾಗಿದೆ.

189 ವಿಷಯಗಳನ್ನು ಶೂನ್ಯ ವೇಳೆಯಲ್ಲಿ ಚರ್ಚಿಸಲು ಅವಕಾಶ ಮಾಡಿಕೊಟ್ಟು ಉತ್ತರ ಒದಗಿಸಲಾಗಿದೆ. 1 ಶಾಸನಾತ್ಮಕ ನಿರ್ಣಯವನ್ನು ಸದನದಲ್ಲಿ ಮಂಡಿಸಲು ಅವಕಾಶ ನೀಡಿ, ಅಂಗೀಕರಿಸಲಾಗಿದೆ. ಖಾಸಗಿ ಸದಸ್ಯರ ವಿಧೇಯಕ ಮತ್ತು ನಿರ್ಣಯಗಳ ಅಡಿಯಲ್ಲಿ ಒಂದು ನಿರ್ಣಯವನ್ನು ಸದನದಲ್ಲಿ ಮಂಡಿಸಿ ಚರ್ಚಿಸಲಾಗಿದೆ.

ಹಣಕಾಸು ಸಚಿವರಾದ ಸನ್ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ 27.3.2000 ರಂದು 2000–2001ನೇ ಸಾಲಿನ, ದಿನಾಂಕ: 26.3.2001 ರಂದು 2001–2002ನೇ ಸಾಲಿನ, ದಿನಾಂಕ 21.3.2002 ರಂದು, 2002–2003 ನೇ ಸಾಲಿನ ಹಾಗೂ ದಿನಾಂಕ 21.3.2003 ರಂದು 2003–2004 ನೇ ಸಾಲಿನ ಹಾಗೂ ದಿನಾಂಕ 5.2.2004 ರಂದು 2004–05ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಮಂಡಿಸಿದ್ದು, ಸುದೀರ್ಘ ಚರ್ಚೆ ನಡೆಸಿ ಸರ್ಕಾರದಿಂದ ಉತ್ತರಿಸಲಾಗಿದೆ. ಅಲ್ಲದೆ ಆಯಾಯ ವರ್ಷಗಳಲ್ಲಿ ಪೂರಕ ಅಂದಾಜುಗಳನ್ನು ಮಂಡಿಸಿ, ಅಂಗೀಕರಿಸಲಾಗಿದೆ.

ಹನ್ನೊಂದನೇ ವಿಧಾನ ಸಭೆಯ ಅವಧಿಯಲ್ಲಿ ಸ್ಥಾಯಿ ಸಮಿತಿಗಳು ಸುಮಾರು 36 ವರದಿಗಳನ್ನು ಸದನದಲ್ಲಿ ಒಪ್ಪಿಸಲಾಗಿದೆ. ಭಾರತದ ಮಹಾ ಲೆಕ್ಕಪರಿಶೋಧಕರು ಹಾಗೂ ಲೆಕ್ಕಪತ್ರ ನಿಯಂತ್ರಕರು ನೀಡಿದ ಹಣಕಾಸು ಲೆಕ್ಕಪತ್ರಗಳು ಹಾಗೂ ಧನವಿನಿಯೋಗ ಲೆಕ್ಕಪತ್ರಗಳ ವರದಿಗಳನ್ನು ಸಿವಿಲ್ ವರದಿ ಮತ್ತು ರಾಜಸ್ವ ಸ್ವೀಕೃತಿಗಳನ್ನು ಸದನದಲ್ಲಿ ಮಂಡಿಸಲಾಗಿದೆ.

ಕರ್ನಾಟಕ ವಿಧಾನ ಮಂಡಲದಲ್ಲಿ ಮೊದಲ ಬಾರಿಗೆ 1994–95ನೇ ಸಾಲಿನಲ್ಲಿ ವಿಷಯ ಸಮಿತಿಗಳನ್ನು ರಚಿಸಲಾಗಿದೆ. ತದನಂತರ 1998–99 ನೇ ಆರ್ಥಿಕ ವರ್ಷದಲ್ಲಿ ವಿಷಯ ಸಮಿತಿಗಳನ್ನು ಪುನರ್ರಚಿಸಲಾಯಿತು. ಪುನಃ ದಿನಾಂಕ 27.3.2001 ರಿಂದ ವಿಷಯ ಸಮಿತಿಯ ಪದ್ಧತಿಯನ್ನು ಪುನಃ ಜಾರಿಗೆ ತರಲಾಗಿ 15 ವಿಷಯ ಸಮಿತಿಗಳನ್ನು ಆಗಿಂದಾಗ್ಗೆ ರಚಿಸಲಾಗಿ ಕಾರ್ಯನಿರ್ವಹಿಸಿವೆ.

ಈ ಅವಧಿಯಲ್ಲಿ ವಿಧಾನ ಪರಿಷತ್ತಿನ ವಿಧೇಯಕಗಳು ಸೇರಿದಂತೆ ಒಟ್ಟು 151 ವಿಧೇಯಕಗಳನ್ನು ಪರ್ಯಾಲೋಚಿಸಿ ಅಂಗೀಕರಿಸಲಾಗಿದೆ.

ಒಟ್ಟು 9 ಹಕ್ಕುಚ್ಯುತಿ ಸೂಚನೆಗಳನ್ನು ಹಕ್ಕುಬಾಧ್ಯತಾ ಸಮಿತಿಗೆ ಪರಿಶೀಲಿಸಿ ವರದಿ ನೀಡಲು ಒಪ್ಪಿಸಲಾಗಿದೆ. ಹಕ್ಕುಚ್ಯುತಿ ಸೂಚನೆಗಳಿಗೆ ಸಂಬಂಧಿಸಿದಂತೆ 3 ವರದಿಗಳನ್ನು ಸದನಕ್ಕೆ ಒಪ್ಪಿಸಲಾಗಿದೆ.

ಕಾವೇರಿ ಜಲ ವಿವಾದಕ್ಕೆ ಸಂಬಂಧಿಸಿದಂತೆ ಮತ್ತು ಬರಗಾಲದ ಬಗ್ಗೆ ಚರ್ಚಿಸಲು ದಿನಾಂಕ: 24.9.2002 ರಂದು ಒಂದು ದಿನ ತುರ್ತು ಅಧಿವೇಶನ ಕರೆಯಲಾಗಿದೆ.

ಪುನಃ ಎಲ್ಲರಿಗೂ ಧನ್ಯವಾದಗಳನ್ನು ಹೇಳುತ್ತಾ ಈಗ ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡುತ್ತೇನೆ.

(ಸದನವು ಸಂಜೆ 7 ಗಂಟೆ 31 ನಿಮಿಷಕ್ಕೆ ಅನಿರ್ದಿಷ್ಟ ಕಾಲಾವಧಿವರೆಗೆ ಮುಂದೂಡಲ್ಪಟ್ಟಿತು)